# ಕರ್ನಾಟಕ ವಿಧಾನ ಪರಿಷತ್ತು

**01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1093**

**02. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)**

**03. ಉತ್ತರಿಸುವ ದಿನಾಂಕ : 25.07.2024**

**04. ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಆರೋಗ್ಯ ಭಾಗ್ಯ ಯೋಜನೆ ಜಾರಿ ತಂದಿದ್ದು, ಅದರ ಉಪಯೋಗ ಪಡೆದು ಚಿಕಿತ್ಸಾ ವೆಚ್ಚದ ಬಿಲ್ಲುಗಳನ್ನು ಮರುಪಾವತಿಗಾಗಿ ಇಲಾಖೆಗೆ ನೀಡಿದ ಬಳಿಕ ನಿಯಮ ಉಲ್ಲಂಘಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪೊಲೀಸ್ ಇಲಾಖೆಯಲ್ಲಿನ ಆರೋಗ್ಯ ಭಾಗ್ಯ ಯೋಜನೆಯಡಿ ಪಡೆದ ಚಿಕಿತ್ಸಾ ವೆಚ್ಚದ ಬಿಲ್ಲುಗಳನ್ನು ಪರಿಶೀಲನೆ ಮಾಡುವ ಸಲುವಾಗಿ ಇಲಾಖೆಗೆ ನುರಿತ ನೋಡಲ್ ಏಜೆನ್ಸಿ ರವರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಸದರಿ ಏಜೆನ್ಸಿ ರವರು ಸಿ.ಜಿ.ಹೆಚ್.ಎಸ್ ಹಾಗೂ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮ, 1963ರ ಅನುಸಾರ ಬಿಲ್ಲುಗಳನ್ನು ಪರಿಶೀಲನೆ ಮಾಡಿ ನೀಡಿದ ವರದಿ ಆಧಾರದ ಮೇಲೆ ಸರ್ಕಾರದಿಂದ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡಿಕೊಳ್ಳಲಾಗುತ್ತದೆ. ಯಾವುದೇ ನಿಯಮವನ್ನು ಉಲ್ಲಂಘಿಸಿ ಆರೋಗ್ಯ ಭಾಗ್ಯ ಯೋಜನೆಯಡಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲಾಗಿರುವುದಿಲ್ಲ. |
| ಆ) | ಚಿಕಿತ್ಸಾ ವೆಚ್ಚದ ಬಿಲ್ಲುಗಳು ನಿಯಮದ ಪ್ರಕಾರ ಸರಿ ಇದ್ದರೂ, ನಿಯಮದಡಿ ಸರಿ ಇಲ್ಲ ಎಂದು ತಿಳಿಸಿ, ಲೆಕ್ಕಪರಿಶೋಧನೆ ಸಮಿತಿ ವಸೂಲಾತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಸಿಬ್ಬಂದಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; | ಆರೋಗ್ಯ ಭಾಗ್ಯ ಯೋಜನೆಯಡಿ ಪಡೆದ ಚಿಕಿತ್ಸಾ ಬಿಲ್ಲುಗಳನ್ನು ಸಿ.ಜಿ.ಹೆಚ್.ಎಸ್/ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮ, 1963ರ ದರದಂತೆ ಮರುಪಾವತಿ ಮಾಡಲಾಗುತ್ತಿದ್ದು, ಸದರಿ ಬಿಲ್ಲುಗಳ ಮರುಪಾವತಿ ಬಗ್ಗೆ ಲೆಕ್ಕಪರಿಶೋಧನೆ ಸಮಿತಿಯಿಂದ ಯಾವುದೇ ಆಕ್ಷೇಪಣೆಯಾಗಿರುವುದಿಲ್ಲ. |
| ಇ) | ಆರೋಗ್ಯ ಭಾಗ್ಯ ಯೋಜನೆಯಡಿ ಪರಿಹಾರ ಪಡೆದವರು ಹಲವಾರು ಸಿಬ್ಬಂದಿಗಳು ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಡಿಯಲ್ಲಿಯೂ ಪರಿಹಾರ ಪಡೆಯಲು ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬಂದಿರುವುದಿಲ್ಲ. |

**HD 171 PPS 2024**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು